**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 235/2023**

ಪಿ.ಡಬ್ಲ್ಯೂ: 6

ಸಿ.ಡಬ್ಲ್ಯೂ: 5

| | | |
|---|---|---|
| ಸಾಕ್ಷಿದಾರರ ಹೆಸರು | : | ಸಂತೋಷ |
| ತಂದೆಯ ಹೆಸರು: | : | ರಾಮನಾಯ್ಕ |
| ವಯಸ್ಸು | : | 32 **ವರ್ಷ** |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಕರಕುಚ್ಚಿ |

**ದಿನಾಂಕ: 09-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಈಗ್ಗೆ ಸುಮಾರು ವರ್ಷಗಳ ಹಿಂದೆ ರಾತ್ರಿ 8-00 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಆವರಣದಲ್ಲಿ ಒಂದು ಕೆ ಎಸ್ ಆರ್ ಟಿ ಸಿ ಬಸ್ ನಿಂತಿದ್ದು, ಪೊಲೀಸರು ಒಂದು ದಾಖಲಾತಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-5 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ: **10-07-2022** ರಂದು ಲಕ್ಕವಳ್ಳಿ ಪೊಲೀಸ್ ಠಾಣಾ ಆವರಣದಲಿಲ ಬೆಳಿಗ್ಗೆ **11.00** ರಿಂದ **11.45** ರವರಗೆ ಅಪಘಾತಪಡಿಸಿದ ವಾಹನವಾದ ಕೆಎ **17** ಎಫ್ **1336** ಕೆ ಎಸ್ ಆರ್ ಟಿಸಿ ಬಸ್ಸು ಕೆ ಎ **14** ಯು **7877** ಬೈಕಿಗೆ ಅಪಘಾತಪಡಿಸಿರುವ ವಿಚಾರವಾಗಿ ಪೊಲೀಸರು ಮಹಜರ್

ಮಾಡಿದ್ದು, ಸದರಿ ಮಹಜರ್ ಗೆ ನೀವು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಸಹಿ ಮಾಡಿರುತ್ತೇನೆ, ಆದರೆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಿ ಪೊಲೀಸರು ಬಸ್ ನ್ನು ಅಮಾನತ್ತುಪಡಿಸಿಕೊಳ್ಳುವಾಗ ಛಾಯಚಿತ್ರವನ್ನು ತೆಗೆದಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ</u>** <u>ಶ್ರೀ ಎ ಆರ್ ಕೆ</u> **<u>ವಕೀಲರಿಂದ.</u>**

ಲಕ್ಕವಳ್ಳಿ ಪೊಲೀಸರು ನನಗೆ ಪರಿಚಯ ಇದ್ದು, ಅವರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ, ನನಗೆ ಯಾವುದೇ ವಿಚಾರ ತಿಳಿದಿರುವುದಿಲ್ಲ. ಛಾಯಚಿತ್ರವನ್ನು ಪೊಲೀಸರ ಕೋರಿಕೆಯ ಮೇರೆಗೆ ತೆಗೆಸಿಕೊಂಡಿರುತ್ತೇನೆ, ಯಾವುದೇ ಮಾಹಿತಿ ಇರುವುದಿಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರ ನಾನು ಓದಿರುವುದಿಲ್ಲ, ಪೊಲೀಸರು ನನಗೆ ಹೇಳಿರುವುದಿಲ್ಲ.

**<u>ಮರುವಿಚಾರಣೆ</u>:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**